ಇವತ್ತು ನಾವು ಕಳೆದುಕೊಂಡಿದ್ದೇವೆ. ನಗರದ ಎಲ್ಲ ಶಾಸಕರ ಜೊತೆ ಮತ್ತು ಎಲ್ಲರ ಜೊತೆ ಚರ್ಚೆ ಮಾಡಿ ಪ್ರಮುಖವಾದ ರಸ್ತೆಗೆ ಅವರ ಹೆಸರನ್ನಿಟ್ಟು ಸ್ಮಾರಕವನ್ನು ನಿರ್ಮಾಣ ಮಾಡಿ ನಾವು ನೀವೆಲ್ಲ ಒಟ್ಟಿಗೆ ಹೋಗಿ ಶ್ರದ್ಧಾಂಜಲಿಯನ್ನು ಮತ್ತು ಅಂತಿಮ ದರ್ಶನವನ್ನು ಮಾಡುವ ಅವಕಾಶ ವನ್ನು ನಮಗೆ ಮುಖ್ಯಮಂತ್ರಿಯವರು ಮತ್ತು ಈ ಸಭೆ ಕಲ್ಪಿಸಿಕೊಡ ಬೇಕೆಂದು ಹೇಳುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್ : ಮೃತರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕು.

(ಡಾ: ವಿಷ್ಣುವರ್ಧನ್‌ರವರ ನಿಧನದ ಗೌರವಾರ್ಥ ಸದನದ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಿದರು)

ಛೇರ್ಮನ್ : ಈ ಸದನವು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಿಕೊಡಲಾಗುವುದು.

2. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರಗಳು :

ವಿಷಯ : ಮಾನ್ಯ ಸಭಾಧ್ಯಕ್ಷರ ಚುನಾವಣೆಯನ್ನು ಮುಂದೂಡಲು ಒತ್ತಾಯ :

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು) : ಈಗಾಗಲೇ ಸಂತಾಪ ಸೂಚನೆ ನಿರ್ಣಯದ ಮೇಲೆ ಮಾತನಾಡುವಾಗ ಸರ್ಕಾರಕ್ಕೆ ಒಂದು ಮನವಿ ಮಾಡಿದ್ದೆ. ಇವತ್ತು Speaker ರವರ ಚುನಾವಣೆಗೆ ದಿನಾಂಕ ನಿಗದಿಯಾಗಿದೆ. ಆ ಬಗ್ಗೆ ಇವತ್ತು ಅಜೆಂಡಾದಲ್ಲಿ ಕೂಡ ಬಂದಿದೆ. Question hour ಆದಮೇಲೆ Paper ಗಳನ್ನು lay ಮಾಡುವುದು, report ಗಳನ್ನು lay ಮಾಡುವುದು ಇದೆ. ಆಮೇಲೆ Speaker ಚುನಾವಣೆ motion ಎಂದು ಇದೆ. ಅದನ್ನು ಮಾಡುವುದಿದೆ. ಸದನ ಮತ್ತು ಸರ್ಕಾರ ಕೂಡ ಮೃತರ ಗೌರವಾರ್ಥ ಮೃತರಿಗೆ ಗೌರವ ಸಲ್ಲಿಸುವ ಕಾರಣಕ್ಕೋಸ್ಕರ ಸದನವನ್ನು ಮುಂದಕ್ಕೆ ಹಾಕಬೇಕು. ನಮ್ಮ ಅಜೆಂಡಾದಲ್ಲಿರುವ ಯಾವುದೇ ಕಲಾಪಗಳನ್ನು ನಾವು ನಡೆಸದೆ ಮುಂದಕ್ಕೆ ಹಾಕುವುದರಿಂದ ಅವರಿಗೆ ಗೌರವ ಸಲ್ಲಿಸಿದ ಹಾಗೆ ಆಗುತ್ತದೆ. ಅಜೆಂಡಾದಲ್ಲಿರುವ ಯಾವುದೇ ಒಂದು

ವಿಷಯವನ್ನು transaction ಮಾಡಿದರೂ ಕೂಡ ಆಗ ಸದನ ನಡೆಸಿದ ಹಾಗೇ ಆಗುತ್ತದೆ. ಆ ಕಾರಣದಿಂದ ತಮಗೂ ಗೊತ್ತಿದೆ. ಮಾನ್ಯ ರಾಜ್ಯಪಾಲರು ಇಲ್ಲಿ ಸಭಾಧ್ಯಕ್ಷರ ಚುನಾವಣೆಗೆ date ನಿಗದಿ ಪಡಿಸಿದ್ದಾರೆ. ಅದರ ಅರ್ಥ ಇವತ್ತೇ ಮಾಡಿ ಮುಗಿಸಬೇಕೆಂದಿಲ್ಲ. ಇಂಥ ವಿಶೇಷ ಸಂದರ್ಭ, ಸನ್ನಿವೇಶ ನಿರ್ಮಾಣವಾದಾಗ ಮುಂದಕ್ಕೆ ಹಾಕಬಹುದು. ಆದರೆ, ಯಾವಾಗಲೂ ಈ ತರಹದ coincidence ಆಗಿರಲಿಲ್ಲ. ಒಬ್ಬ ಮೇರು ನಟ ಸಾಯುವುದು, ಅವರಿಗೆ ಶ್ರದ್ಧಾಂಜಲಿ ಸಲ್ಲಿಸಲು ಸಭೆ ಸೇರುವುದು, ಇವತ್ತು ಇಡೀ ಸರ್ಕಾರ ಅವರಿಗೆ ಗೌರವ ಸಲ್ಲಿಸುವುದಕ್ಕೋಸ್ಕರ ಶೋಕ ದಿನಾಚರಣೆ, ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡತಕ್ಕಂಥದ್ದು ಸರ್ಕಾರ ಅವರಿಗೆ ಸರ್ವ ಸರ್ಕಾರಿ ಮರ್ಯಾದೆಯೊಂದಿಗೆ ಅಂತ್ಯಕ್ರಿಯೆ ಮಾಡುವುದು, ಈ ತರಹದ್ದು ಬಹುಶಃ ಕರ್ನಾಟಕದ ಇತಿಹಾಸದಲ್ಲಿ, ವಿಧಾನಸಭಾ ಇತಿಹಾಸದಲ್ಲಿ ಈ ತರಹದ ಸನ್ನಿವೇಶ, ಸಂದರ್ಭ ಯಾವತ್ತೂ ಬಂದಿರಲಿಲ್ಲ. ಇದೊಂದು ವಿಶೇಷ ಸಂದರ್ಭ ಇವತ್ತು ಒದಗಿ ಬಂದಿದೆ. Speaker ರವರಿಗೆ ನಾನೊಂದು ಪತ್ರ ಕೂಡ ಕಳುಹಿಸಿದ್ದೆ. BAC ಕರೆಯಿರಿ, 5 ನಿಮಿಷ ಕುಳಿತು ಚರ್ಚೆ ಮಾಡಿ BAC ಯಲ್ಲಿ ಈ ಸದನ ಮುಂದಕ್ಕೆ ಹಾಕುವ ಬಗ್ಗೆ ನಿರ್ಣಯ ಮಾಡೋಣ, Governor ಗೆ BAC ನಿರ್ಣಯವನ್ನು ಕಳುಹಿಸಿ ಕೊಡೋಣ, ಮತ್ತೆ ಅವರ ಮೂಲಕವೇ ಇನ್ನೊಂದು date ನಿಗದಿ ಮಾಡಿಸೋಣ ಎಂದು ಹೇಳಿದೆ. ಅದು ಮಾಡಬಹುದು. ನಾಳೆ ಚುನಾವಣೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ, ಸದನವನ್ನು ಇನ್ನೊಂದು ದಿವಸ ಮುಂದಕ್ಕೆ ಹಾಕಬೇಕಾಗುತ್ತದೆ. 1ನೇ ತಾರೀಖಿನವರೆಗೆ Session ಇರಬೇಕಾ ಗುತ್ತದೆ. ಏಕೆಂದರೆ, ಮತ್ತೆ motion ಕೊಡಬೇಕಾಗಿ ಬರುತ್ತದೆ. ಆ ಕಾರಣ ದಿಂದ ನಾನೇನು ಹೇಳುತ್ತೇನೆ ಎಂದರೆ, ಸರ್ಕಾರ ಇದನ್ನು ಬಹಳ prestige ಆಗಿ ಮಾಡಿಕೊಳ್ಳಬೇಕಾದ ಅಗತ್ಯವಿಲ್ಲ. ಅವರೂ ಕೂಡ ಮೃತರಿಗೆ ಗೌರವ ಸಲ್ಲಿಸಬೇಕೆನ್ನುವ ಭಾವನೆ ಇರುವುದರಿಂದ ಜನರಿಗೂ ಕೂಡ ಒಳ್ಳೆಯ ಸಂದೇಶ ಹೋಗಬೇಕೆನ್ನುವ ಕಾರಣಕ್ಕೋಸ್ಕರ ನಾವು ನಮ್ಮ ಗೌರವ ಸಲ್ಲಿಸುವಾಗ ಇವತ್ತು Speaker ಚುನಾವಣೆ ಮಾಡದೆ ಇನ್ನೊಂದು ದಿನ ಮಾಡಿದರೆ ಅಂಥ ದೊಡ್ಡ ಸಮಸ್ಯೆ ಏನೂ ಆಗುವುದಿಲ್ಲ, ಸಂವಿಧಾನ ಬಿಕ್ಕಿಟ್ಟೇನೂ ನಿರ್ಮಾಣವಾಗುವುದಿಲ್ಲ, ಸಂವಿಧಾನದ ಉಲ್ಲಂಘನೆಯೂ ಕೂಡ

ಆಗುವುದಿಲ್ಲ. Cabinet ನಲ್ಲಿ ಇನ್ನೊಂದು ಸಲ ತೀರ್ಮಾನ ಮಾಡಿ Governor ರವರಿಗೆ ತಿಳಿಸಬೇಕಾಗುತ್ತದೆ. ಅದನ್ನು ಅವರಿಗೆ ತಿಳಿಸಿ ಜನವರಿಯಲ್ಲಿ ಮತ್ತೆ ಸದನ ಸೇರುತ್ತೇವೆ ಎಂದು ಹೇಳುಬಹುದು ಅಥವಾ ಸೋಮವಾರ ಇನ್ನೊಂದು ದಿನ ಸದನ ನಡೆಸುವುದಾದರೆ ನಡೆಸಬಹುದು, extend ಸದನವನ್ನು ಮಾಡಬಹುದು. ನಾಳೆ ಪುನಃ motion ಕೊಟ್ಟು ನಾಡಿದ್ದು ಬೇಕಾದರೆ ಚುನಾವಣೆ ಮಾಡಬಹುದು. ಇಲ್ಲದೇ ಹೋದರೆ ಇವತ್ತೇ emergent cabinet meeting ಕರೆದು ತೀರ್ಮಾನಿಸಿ Governor ರವರಿಗೆ ಮನವಿಯನ್ನು ಕಳುಹಿಸಿಕೊಡಬಹುದು. There is no bar in the Constitution. ಚುನಾವಣೆಯನ್ನು ಮುಂದಕ್ಕೆ ಹಾಕುವುದರಿಂದ it is not going to be violation of the Constitution. Violation ಏನೂ ಆಗುವುದಿಲ್ಲ. Constitution ಬಿಕ್ಕಟ್ಟು ನಿರ್ಮಾಣವಾಗುತ್ತದೆ ಎನ್ನುವ ತರಹವೂ ಇಲ್ಲ. ಅಥವಾ ಯಾವುದೋ ಒಂದು Financial Bill ಇವತ್ತು pass ಆಗದಿದ್ದರೆ, ನಾಳೆ ಕೊನೆಯ ದಿನ ಆಗುತ್ತದೆ, ಇವತ್ತೇ pass ಮಾಡಬೇಕು, ಇಲ್ಲದಿದ್ದರೆ ಸಂಬಳ ಕೊಡುವುದಕ್ಕಾಗುವುದಿಲ್ಲ, approval ಇಲ್ಲದೆ ನಾಳೆಯಿಂದ ಒಂದು ರೂಪಾಯಿ ಸಹ ಖರ್ಚು ಮಾಡುವುದಕ್ಕಾಗುವುದಿಲ್ಲ ಎಂದೂ ಇಲ್ಲ. ಈಗಾಗಲೆ Deputy Speaker ರವರು Speraker ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ, ನಾನು ನಿಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಸರ್ಕಾರ ಇದನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಇವತ್ತೇ ಒಂದು emergent Cabinet Meeting ಕರೆಯಬಹುದು, ಆ ರೀತಿ ಕರೆದು Governor ರವರಿಗೆ ಕಳುಹಿಸಿಕೊಡಬಹುದು. ನಾಳೆ ಚುನಾವಣೆ ಮಾಡುವುದಕ್ಕೆ ಹತ್ತಿರ ಒಪ್ಪಿಗೆ ತೆಗೆದುಕೊಳ್ಳಬಹುದು ಅಥವಾ ಇನ್ನೊಂದು ದಿವಸ ಚುನಾವಣೆ ನಡೆಸಲಿಕ್ಕೆ ಒಪ್ಪಿಗೆ ತೆಗೆದುಕೊಳ್ಳಬಹುದು, Governor ಇದನ್ನು reject ಮಾಡುತ್ತಾರೆಂದು ಭಾವಿಸುವುದಿಲ್ಲ. ಏಕೆಂದರೆ, ಇದು ಇಡೀ ಸದನದ ಭಾವನೆಯಾಗಿರುವುದರಿಂದ ಇಡೀ ಸದನದ ನಿರ್ಣಯವಾಗಿರುವುದರಿಂದ, I do not think Governor ರವರು ಹೇಳಿದಂಥ ಸೂಚನೆಗೆ ಅಗೌರವ ಮಾಡುತ್ತೇವೆಂದೂ ಆಗುವುದಿಲ್ಲ. ಆ ಹಿನ್ನೆಲೆಯಲ್ಲಿ ನಾನು ನಿಮ್ಮ ಮೂಲಕ ಸರ್ಕಾರಕ್ಕೆ

ಒತ್ತಾಯಿಸುತ್ತೇನೆ. ಇದನ್ನು ಮುಂದೂಡಬೇಕು. ಇವತ್ತು ಮೃತರಿಗೆ ಶ್ರದ್ಧಾಂಜಲಿ ಸಲ್ಲಿಸಿದ ಮೇಲೆ, ಗೌರವ ಸಲ್ಲಿಸಿದ ಮೇಲೆ ಸದನ ಯಾವುದೇ transaction ಮಾಡುವುದು ಸರಿಯಾದುದಲ್ಲ, ಸರಿಯಾದ ಸಂಪ್ರದಾಯವಾಗಲಾರದು, ಸರಿಯಾದ ರೀತಿಯಲ್ಲಿ ಗೌರವ ಕೂಡ ಸಲ್ಲಿಸಿದ ಹಾಗೆ ಆಗುವುದಿಲ್ಲ ಎಂಬುದು ನನ್ನ ಭಾವನೆ. ಈ ನನ್ನ ಭಾವನೆಯನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಆದ್ದರಿಂದ, ಸರ್ಕಾರ ಇದನ್ನು ಪ್ರತಿಷ್ಠೆಯಾಗಿ ಮಾಡಿಕೊಳ್ಳಬಾರದು. ಈ ಚುನಾವಣೆ ಇವತ್ತೇ ಆಗಬೇಕು, ಆಗದಿದ್ದರೆ ಸಂವಿಧಾನಕ್ಕೆ ತೊಂದರೆಯಾಗುತ್ತದೆ, ಅಪಚಾರವಾಗುತ್ತದೆ ಆ ತರಹದ್ದು ಏನೂ ಇಲ್ಲದಿರುವುದರಿಂದ, ಸಂವಿಧಾನದ ಉಲ್ಲಂಘನೆ ಏನೂ ಇಲ್ಲದಿರುವುದರಿಂದ ಇದನ್ನು ಮುಂದೂಡಬೇಕೆಂದು ಒತ್ತಾಯಿಸುತ್ತೇನೆ.

ಛೇರ್ಮನ್ : ಪ್ರತಿಪಕ್ಷದ ನಾಯಕರ ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ (ಹೊಳೆನರಸೀಪುರ) : ಮಾನ್ಯ ಛೇರ್ಮನ್‌ರವರೆ, ಇವತ್ತಿನ ದಿವಸ ಡಾ: ವಿಷ್ಣುವರ್ಧನ್‌ರವರ ನಿಧನದ ಗೌರವಾರ್ಥ ಸಂತಾಪ ಸೂಚನೆ ನಿರ್ಣಯವಾದ ಮೇಲೆ ಯಾವುದೇ ಕಾರ್ಯಕ್ರಮ ಮಾಡಬಾರದು. ಏಕೆಂದರೆ, ಸರ್ಕಾರ ಶಾಲಾ ಕಾಲೇಜುಗಳಿಗೆ ರಜೆ ಘೋಷಣೆ ಮಾಡಿದೆ. ಅವರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಯಾವುದೇ ಕಾರ್ಯಕ್ರಮ ನಡೆಸದೆ ಸದನವನ್ನು ಮುಂದೂಡಬೇಕು. ಅಜೆಂಡಾ ಪ್ರಕಾರ ಇದಾದ ಮೇಲೆ Question hour ಇದೆ, Question hour ಆದಮೇಲೆ ಕಾಗದ ಪತ್ರಗಳನ್ನು ಮಂಡಿಸುವುದು ಇದೆ, ಅದಾದ ಮೇಲೆ ಅಧ್ಯಕ್ಷರ ಚುನಾವಣೆ ಎಂದು ಇದೆ. ಸರ್ಕಾರ ಇದನ್ನು prestige question ಆಗಿ ತೆಗೆದುಕೊಳ್ಳುವುದು ಬೇಡ. ನಾಳೆ ಚುನಾವಣೆ ಮಾಡೋಣ. ನಮ್ಮ ಸಭಾನಾಯಕರು ಇದರ ಬಗ್ಗೆ ಹೇಳಬೇಕು. ಅದರಲ್ಲಿ ಭಯ ಪಡಬೇಕಾದದ್ದು ಏನೂ ಇಲ್ಲ. ಅಧ್ಯಕ್ಷರ ಚುನಾವಣೆ ಆದಮೇಲೆ ಒಳ್ಳೆಯ ಕೆಲಸ ಮಾಡಲಿ ಎಂದು ನಾವು ಹೇಳಬೇಕಲ್ಲವೇ. ಅಧ್ಯಕ್ಷರ ಆಯ್ಕೆ ಆದಮೇಲೆ ಅಧ್ಯಕ್ಷರಿಗೆ bouquet ಕೊಡಬೇಕು. ಡಾ: ವಿಷ್ಣುವರ್ಧನ್‌ರವರ ಪಾರ್ಥಿವ ಶರೀರವನ್ನು Bangalore ನ National College Ground ನಲ್ಲಿಟ್ಟಿದ್ದಾರೆ. ಇಲ್ಲಿ ಈಗ ನಾವು ಸದನವನ್ನು ಮುಂದಕ್ಕೆ ಹಾಕದೇ ಹೋದರೆ ನಾಳೆಯ ದಿವಸ ರಾಜ್ಯದ 5 ಕೋಟಿ ಜನರು ಏನು ಹೇಳುತ್ತಾರೆನ್ನುವುದನ್ನು ನಾವೆಲ್ಲ ಅರ್ಥಮಾಡಿಕೊಳ್ಳಬೇಕಾಗುತ್ತದೆ.

ಇದರ ಜೊತೆಗೆ ತಮ್ಮ ಗಮನಕ್ಕೆ ತರುವುದೇನೆಂದರೆ, ಅಧ್ಯಕ್ಷರ ಸ್ಥಾನದಲ್ಲಿ ಕುಳಿತುಕೊಳ್ಳಲು 5 ಜನ panel ನಲ್ಲಿದ್ದಾರೆ. panel ಅನ್ನು Governor ರವರು approve ಮಾಡಬೇಕಾಗುತ್ತದೆ. ಏಕೆಂದರೆ, ಇವತ್ತು ಹೊಸ ಅಧ್ಯಕ್ಷರ ಚುನಾವಣೆ ನಡೆಯುತ್ತಿದೆ. ಉಪಾಧ್ಯಕ್ಷರೇ ಅಧ್ಯಕ್ಷರ ಚುನಾವಣೆಗೆ ನಿಂತಿದ್ದಾರೆ. ಇದರಲ್ಲಿ ಕಾನೂನು ತೊಡಕು ಬೇರೆ ಇದೆ, Election ನಡೆಯುವಾಗ election ಅನ್ನು ಯಾರು ನಡೆಸಬೇಕೆನ್ನುವ panel name ಅನ್ನು Governor ರವರು approve ಮಾಡಿ ಕಳುಹಿಸಬೇಕಾಗುತ್ತದೆ. ಮೇಲ್ಮನೆಗೆ ಕಳೆದ ಸಲ election ನಡೆಯುವಾಗ ಇದೇ ತರಹ ಆಯಿತು. Panel name approve ಆಗಿದೆಯೇ? ಇದೇ ರೀತಿ ಮೇಲ್ಮನೆ ಚುನಾವಣೆ ನಡೆಸುವಾಗ panel ನಲ್ಲಿ 5 ಜನ ಯಾರಿದ್ದಾರೆ ಅವರ ಹೆಸರನ್ನು Governor ರವರು approve ಮಾಡಬೇಕಾಯಿತು. ಏಕೆಂದರೆ, ಉಪಾಧ್ಯಕ್ಷರು ಇದ್ದರೆ ಮಾಡಬಹುದಾಗಿತ್ತು. ಇವತ್ತು ಇಲ್ಲಿ ಉಪಾಧ್ಯಕ್ಷರು ಇಲ್ಲ. ಉಪಾಧ್ಯಕ್ಷರೇ ಚುನಾವಣೆಗೆ ನಿಂತಿರುವಾಗ ಕಾನೂನು ರೀತಿ ಚುನಾವಣೆ ಮಾಡುವುದಕ್ಕೆ ಇವತ್ತು ಅವಕಾಶವಿಲ್ಲ.

(12-00 PM)

ಆದ್ದರಿಂದ, ಒಂದು ಕಡೆ ಇವತ್ತು ವಿಷ್ಣುವರ್ಧನ್ ರವರ ಸಂತಾಪ ಸಭೆ ನಡೆದಿರುವುದು ಒಂದು ಕಡೆ. ಇನ್ನೊಂದು ಕಡೆ ಕಾನೂನು. ನಿಮ್ಮ ಅಧ್ಯಕ್ಷತೆಯಲ್ಲಿ ಮಾಡುವುದಕ್ಕೆ ಆಗುವುದಿಲ್ಲ. ಏಕೆಂದರೆ ರಾಜ್ಯಪಾಲರು ಐದು ಜನರ ಪ್ಯಾನೆಲ್ ಅನ್ನು ಅಪ್ರೂವ್ ಮಾಡಬೇಕಾಗುತ್ತದೆ. ಉಪಾಧ್ಯಕ್ಷರು ಇದ್ದರೆ ಮಾಡಬಹುದಾಗಿತ್ತು. ಉಪಾಧ್ಯಕ್ಷರು ಇಲ್ಲದೇ ಇರುವುದರಿಂದ, ಉಪಾಧ್ಯಕ್ಷರೇ ಇವತ್ತು ಚುನಾವಣೆಯಲ್ಲಿ ನಿಂತಿರುವುದರಿಂದ ಪ್ಯಾನೆಲ್ ನೇಮ್ ಅನ್ನು ಗೌರ್ನರ್‌ರವರೇ ಅಪ್ರೂವ್ ಮಾಡಬೇಕಾಗುತ್ತದೆ. ಇದೇ ರೀತಿಯಾಗಿ ವಿಧಾನ ಪರಿಷತ್ತಿನಲ್ಲಿ ಶ್ರೀ ಸುದರ್ಶನ್‌ರವರು ಇದ್ದಾಗ ಎಲೆಕ್ಷನ್ ನಡೆದಂಥ ಸಂದರ್ಭದಲ್ಲಿ ಘಟನೆಗಳಿವೆ, ಬೇಕಾದರೆ ತರಿಸಿ ನೋಡಿ. ವಿಧಾನ ಪರಿಷತ್ತಿನ ಅಧ್ಯಕ್ಷರ ಚುನಾವಣೆ ನಡೆಯಬೇಕಾದರೆ, ಈ ತರಹದ ಒಂದು ಘಟನೆ ಇದೆ. ಅದ್ದರಿಂದ ಇಲ್ಲಿ ಎರಡು ಅಂಶಗಳಿವೆ. ಒಂದು ಕಡೆ ಎಲೆಕ್ಷನ್ ಮಾಡುವುದಕ್ಕೆ ಕಾನೂನು ತೊಡಕು ಇನ್ನೊಂದು ಕಡೆ ವಿಷ್ಣುವರ್ಧನ್‌ರವರ ಸಂತಾಪ ಇದೆ, ಅವರ ಡೆಡ್ ಬಾಡಿ ಅಲ್ಲಿ ಇಟ್ಟುಕೊಂಡು, ಇಲ್ಲಿ ಅಧ್ಯಕ್ಷರಾಗಿ ಆಯ್ಕೆಯಾದ ಮೇಲೆ ಅವರನ್ನು ಗುಣಗಾಣ ಮಾಡುವುದಕ್ಕೆ ಆಗುತ್ತದೆಯೆ?

ಇದನ್ನು ಎಲ್ಲಾ ನಾಯಕರು ಮಾಡಬೇಕು ಅಲ್ಲವೆ? ಏಕೆಂದರೆ, ಅಧ್ಯಕ್ಷರಿಗೆ ಅಗೌರವ ತರುವುದಲ್ಲ. ನಿಮಗೇನಾದರೂ ಅನುಮಾನವೆ? ಹೆದರಿಕೆಯೆ? ನಾಳೆ ಮಾಡಿ.

(ಗೊಂದಲ)

ನೀವು ಬೊಬ್ಬೆ ಹೊಡೆಯುವುದಾದರೆ ಬೊಬ್ಬೆ ಹೊಡೆಯಿರಿ. ಸದನದಲ್ಲಿ ಡಾ: ವಿಷ್ಣುವರ್ಧನ್‌ರವರ ನಿಧನದ ಬಗ್ಗೆ ಸಂತಾಪ ಸೂಚಿಸುತ್ತೇವೆಂದು ಹೇಳಿ ಈ ರೀತಿ ಮಾಡಿದರೆ ರಾಜ್ಯದ ಜನತೆಗೆ ತಪ್ಪು ಭಾವನೆ ಬರುತ್ತದೆ. ಮಾನ್ಯ ಅಧ್ಯಕ್ಷರೆ, ದಯಮಾಡಿ ನಿಮಗೆ ಕಾನೂನಿನಲ್ಲಿ ಸಭೆ ನಡೆಸುವುದಕ್ಕೆ ಅವಕಾಶವಿಲ್ಲ. ಏಕೆಂದರೆ, ನೀವು ಉಪಾಧ್ಯಕ್ಷರಾಗಿದ್ದರೆ ಅಧ್ಯಕ್ಷರ ಚುನಾವಣೆ ನಡೆಸಬಹುದಾಗಿತ್ತು. ಆದ್ದರಿಂದ ನಿಮಗೆ ಕಾನೂನಿನಲ್ಲಿ ಅವಕಾಶವಿಲ್ಲ. Governor ರವರು ಕಾನೂನು ರೀತಿ ಪ್ಯಾನಲ್ ನೇಮ್‌ನ್ನು ಅಪ್ರೂವಲ್ ಮಾಡಬೇಕಾದರೆ ನೀವು ಐದು ಜನರ ಹೆಸರುಗಳನ್ನು ಕಳುಹಿಸಬೇಕಾಗಿತ್ತು. ಐದು ಜನರ ಹೆಸರುಗಳನ್ನು ಕಳುಹಿಸಿದ ಮೇಲೆ ಅವರು ಅಪ್ರೂವಲ್ ಮಾಡಿದಂಥ ವ್ಯಕ್ತಿ ಇಲ್ಲಿ ಕುಳಿತು ಅಧ್ಯಕ್ಷರ ಚುನಾವಣೆ ನಡೆಸಬೇಕಾಗುತ್ತದೆ. ಇದು ಕಾನೂನಿನಲ್ಲಿದೆ. ವಿಧಿವತ್ತಾಗಿ ನೀವು ಪ್ಯಾನಲ್ ನೇಮ್‌ಗೆ ಅಪ್ರೂವಲ್ ತೆಗೆದುಕೊಂಡಿದ್ದೀರಾ ಎಂಬುದನ್ನು ದಯಮಾಡಿ ಸಭೆಗೆ ತಿಳಿಸಿ. ಆದ್ದರಿಂದ ದಯಮಾಡಿ ಇವತ್ತು ಸಂತಾಪ ಸೂಚನೆಯಾದಮೇಲೆ ಸಭೆಯನ್ನು ಮುಂದೂಡಬೇಕು ಎಂದು ನಾನು ಸಭಾಧ್ಯಕ್ಷರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್ (ಕಾನೂನು ಮತ್ತು ಸಂಸದೀಯ ಸಚಿವರು) : ಮಾನ್ಯ ಅಧ್ಯಕ್ಷರೆ, ಪ್ರತಿ ಪಕ್ಷದ ನಾಯಕರು ಮತ್ತೆ ಹಿರಿಯ ಶಾಸಕರಾದ ಜೆಡಿಎಸ್ ನ ನಾಯಕರಾದ ರೇವಣ್ಣನವರು, ತಮ್ಮ ಮನವಿ ಹಾಗೂ ಒತ್ತಾಯ ಎರಡನ್ನೂ ಕೂಡ ಇಲ್ಲಿ ತಿಳಿಸಿದ್ದಾರೆ. ಇಲ್ಲ ಇಲ್ಲ ಅವರು ಎರಡೇ ಪದಗಳನ್ನು ಹೇಳಿರುವುದು. ಅವರು ಅಭಿಪ್ರಾಯವನ್ನು ಹೇಳಿಲ್ಲ. ಅವರು ಹೇಳಿಲ್ಲದ ಪದಗಳನ್ನು ನೀವು ಹೇಳುವುದಕ್ಕೆ ಹೋಗಬೇಡಿ. ಈಗ ಇಲ್ಲಿ ಎರಡು ವಿಚಾರಗಳಿವೆ. ಅವರ ಮನವಿ ಮತ್ತು ಅಭಿಪ್ರಾಯಗಳನ್ನು ತಿಳಿಸಿದ್ದಾರೆ.

"Rule 7 : Election of the Speaker : The election of a Speaker shall be held on such date as the Governor may fix and the Secretary shall thereupon send to every member notice of the date so fixed."

ಈಗ ನಮ್ಮ ರಾಜ್ಯದ ಸನ್ಮಾನ್ಯ ರಾಜ್ಯಪಾಲರು 30ನೇ ತಾರೀಖು ಡಿಸೆಂಬರ್ ಈ ಚುನಾವಣೆ ನಡೆಯತಕ್ಕದ್ದು ಎಂದು ಅವರೊಂದು ದಿನಾಂಕವನ್ನು ನಿಗದಿ ಮಾಡಿ ಕಳುಹಿಸಿ ಕೊಟ್ಟಿದ್ದಾರೆ. ಅವರು ಕಳುಹಿಸಿರುವುದರಿಂದ ಇವತ್ತು ಚುನಾವಣೆ ಪ್ರಕ್ರಿಯೆ ನಡೆಯುತ್ತಿದೆ. ಎರಡನೆಯದಾಗಿ ದಿನಾಂಕ 12ನೇ ಜನವರಿ 2009 ರಂದೇ ನಮ್ಮಲ್ಲಿ ಆ ಒಂದು ಸ್ಥಾನದಲ್ಲಿ ಕುಳಿತು ಸಭಾಧ್ಯಕ್ಷರ ಕಾರ್ಯವನ್ನು ನಡೆಸಲಿಕ್ಕೆ ಪ್ಯಾನಲ್ ಅಫ್ ಮೆಂಬರ್ಸ್ ಅನ್ನು ಮಾಡಿದ್ದಾರೆ. ಸನ್ಮಾನ್ಯರಾದ ಎನ್.ಯೋಗೀಶ್ ಭಟ್‌ರವರು, ಚಂದ್ರಕಾಂತ್ ಬೆಲ್ಲದ್‌ರವರು, ಅಪ್ಪಾಜಿ ಅಲಿಯಾಸ್ ಚನ್ನಬಸವರಾಜ್ ಶಂಕರ್‌ರಾವ್ ನಾಡಗೌಡರವರು, ಹೆಚ್.ಕೆ. ಕುಮಾರಸ್ವಾಮಿಯವರು, ಡಾ: ಜಿ.ಪರಮೇಶ್ವರ್ ರವರು, ಎಸ್.ಶಿವಣ್ಣನವರು, ಎಂದು ಆರು ಜನರ ಪ್ಯಾನಲ್ ಅಫ್ ಮೆಂಬರ್ಸ್ ಮಾಡಿದ್ದಾರೆ. ಈಗ ಸಭಾಧ್ಯಕ್ಷರ ಸ್ಥಾನವನ್ನು ಅಲಂಕರಿಸಿರುವ ಶ್ರೀ ಎನ್.ಯೋಗೀಶ್ ಭಟ್‌ರವರ ಹೆಸರು ಮೊದಲನೆಯದಾಗಿದೆ. ಈಗ ಚುನಾವಣೆಯ ಅಭ್ಯರ್ಥಿಯೇ ಉಪಸಭಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದರಿಂದ, ಪ್ಯಾನಲ್‌ನಲ್ಲಿರುವವರ ಮೊದಲ ಹೆಸರನ್ನು ನಾವು ಸೂಚಿಸಿದ್ದೇವೆ. ಆದ್ದರಿಂದ ಅವರು ಈಗ ಅಲ್ಲಿ ಕುಳಿತಿದ್ದಾರೆ. ಸರ್ಕಾರದ ನಿಲುವು, ಮನವಿ, ಅಭಿಪ್ರಾಯ, ಒತ್ತಾಯ ಏನೆಂದರೆ, ದಯವಿಟ್ಟು ಚುನಾವಣೆ ನಡೆಸಿ, Constitution ಬಾಧಕ ಆಗುವುದಿಲ್ಲವೆಂದು ಅವರು ಹೇಳಿದರು. ಇವತ್ತು ಚುನಾವಣೆ ಮಾಡಿದರೂ ಕೂಡ Constitution ಗೆ ಅಪಚಾರ ಆಗುವುದಿಲ್ಲ, ದಯವಿಟ್ಟು ತಾವು ಇದನ್ನು ಮಾಡಿ.

(ಗೊಂದಲ)

ಶ್ರೀ ಬಂಡೆಪ್ಪ ಕಾಂಶಪೂರ್ : ಮಾನ್ಯ ಅಧ್ಯಕ್ಷರೇ, ನಾಳೆ ನಡೆಸಿ. ಇದನ್ನು ಮಾಡುವದಿದ್ದರೆ ಸಂತಾಪ ಸೂಚನೆ ಏಕೆ ತೆಗೆದುಕೊಳ್ಳಬೇಕಾಗಿತ್ತು?

ಶ್ರೀ ಹೆಚ್.ಡಿ.ರೇವಣ್ಣ : ನಿಮಗೆ ಅಧಿಕಾರ ಇಲ್ಲವೆಂದ ಮೇಲೆ ನೀವು ಹೇಗೆ ನಿರ್ಣಯ ತೆಗೆದುಕೊಳ್ಳುತ್ತೀರಿ? ನಿಮಗೆ ಅಧಿಕಾರವಿಲ್ಲ, ನೀವು ಐದು ಜನರ ಪ್ಯಾನೆಲ್‌ನ್ನು ರಾಜ್ಯಪಾಲರಿಗೆ ಕಳುಹಿಸಿ. ರಾಜ್ಯಪಾಲರು ಪ್ಯಾನೆಲ್

ನೇಮ್ ಅನ್ನು ಅಪ್ರೂವ್ ಮಾಡಲಿ. ಹಿಂದೆ ವಿಧಾನ ಪರಿಷತ್ತಿನಲ್ಲಿ ಆಗಿರುವ ಘಟನೆ ಇದೆ ಬೇಕಾದರೆ ಮಾಹಿತಿ ತರಿಸಿಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾನೂನು ಸಚಿವರು ರೂಲ್ 7 ಅನ್ನು ಏನು ಓದಿದರು, ಇದರ interpretations ಏನು ಇದೆ, "The election of a Speaker shall be held on such date as the Governor may fix" ಎಂದ ತಕ್ಷಣ, Governor ರವರು ಈ ರೂಲ್ ಇರುವುದಕೋಸ್ಕರವೇ ಇದನ್ನು ಫಿಕ್ಸ್ ಮಾಡಿರುವುದು.

"The election of a Speaker shall be held on such date as the Governor may fix and the Secretary shall thereupon send to every member notice of the date so fixed."

ಇದರ ಬಗ್ಗೆ ನಮ್ಮ ತಕರಾರಿಲ್ಲ. I am not disputing this provision. ಬಹುಶಃ ಈ ಪ್ರಾವಿಜನ್ ನಾವು ಮಾಡಿಕೊಳ್ಳುವಾಗ ಈ ತರಹ ಸನ್ನಿವೇಶ ಅಸೆಂಬ್ಲಿಯಲ್ಲಿ ನಿರ್ಮಾಣವಾಗುತ್ತದೆಂದು ಯಾರೂ ಊಹಿಸಿರಲಿಲ್ಲ ವೆಂದು ನನಗೆ ಅನ್ನಿಸುತ್ತದೆ. ಒಬ್ಬರು ಮಹಾನ್ ವ್ಯಕ್ತಿ ಕಾಲವಾಗುತ್ತಾರೆ, ಆ ವ್ಯಕ್ತಿ ಕಾಲಾವಾದ ದಿನವೇ ಸ್ಪೀಕರ್ ಎಲೆಕ್ಷನ್ ಬಂದು ಬಿಡುತ್ತದೆ, ಈ ತರಹದ ಒಂದು ವಿಷನ್ ಇಟ್ಟುಕೊಂಡು ದೂರಾಲೋಚನೆ ಇಟ್ಟುಕೊಂಡು ಯಾರೂ ಪ್ರಾವಿಜನ್‌ಗಳನ್ನು ಫಿಕ್ಸ್ ಮಾಡುವುದು. ಹಾಗಾದರೆ ನಾವು 60 ದಿವಸಗಳು ಸದನ ನಡೆಯಬೇಕೆಂದು "shall" ಎಂದು ಇದೆ. ನೀವು ಏನು 60 ದಿವಸ ಸದನ ನಡೆಸಿಬಿಟ್ಟಿರಾ? is it not a violation? ನೀವು ಈ ತರಹದ technical points ತಂದು ಮಾಡುವುದಕ್ಕೆ ಹೋಗಬೇಡಿ. ಇಡೀ ಸದನ ಅವರಿಗೆ ಗೌರವ ಸಲ್ಲಿಸಬೇಕು ಎನ್ನುವುದಕ್ಕೆ ಇಷ್ಟು ಚರ್ಚೆ ಏಕೆ? ಇಷ್ಟು ಚರ್ಚೆ ಮಾಡುವ ಅಗತ್ಯವಿಲ್ಲ ಎಂದು ನಾನು ಅಂದುಕೊಂಡಿದ್ದೇನೆ. ಇನ್ನೊಂದು ಕ್ಯಾಬಿನೆಟ್ ಡಿಷಿಷನ್ ಮಾಡಿ ಗೌರ್ನರ್‌ರವರಿಗೆ ಕಳುಹಿಸಿದರೆ ಗೌರ್ನರ್‌ರವರು ಬೇಡ ಆಗುವುದಿಲ್ಲವೆನ್ನುತ್ತಾರೆಯೇ? ನಾವು ನಿಮ್ಮ ಜೊತೆಗೆ ಬರುತ್ತೇವೆ ಗೌರ್ನರ್‌ರವರನ್ನು ರಿಕ್ವೆಸ್ಟ್ ಮಾಡಿಕೊಳ್ಳೋಣ. What is prong in that? ಎನು ತಪ್ಪಾಗಿ ಬಿಡುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ : ಸಭೆ ಏನು ಬೇಕಾದರೂ ನಿರ್ಣಯ ಮಾಡಬಹುದು. ಸಭೆಗೆ ನಿರ್ಣಯ ಮಾಡುವುದಕ್ಕೆ ಅಧಿಕಾರವಿದೆ.

ಶ್ರೀ ಸಿದ್ದರಾಮಯ್ಯ : ನಿರ್ಣಯ ಮಾಡುವುದಕ್ಕೆ ಈ ಸಭೆಗೆ ಅಧಿಕಾರವಿಲ್ಲವೆ? ಸ್ಪೀಕರ್‌ಗೆ ಈ ಪ್ರಾವಿಜನ್‌ಗಳನ್ನೇ ಸಸ್‌ಪೆಂಡ್ ಮಾಡುವ ಅಧಿಕಾರವಿದೆ.

ಶ್ರೀ ಹೆಚ್.ಡಿ. ರೇವಣ್ಣ : ರಾಜೀವ್‌ಗಾಂಧಿ ತೀರಿ ಹೋದಾಗ ಪಾರ್ಲಿಮೆಂಟ್ ಎಲೆಕ್ಷನ್ ಮುಂದೆ ಹೋಗಲಿಲ್ಲವೆ?

SRI SIDDARAMAIAH : In a situation like this, when the rules are framed, nobody has anticipated that such a situation will arise. Any rule can be suspended by the House, by the Speraker, by your goodself such being the case, ಅವರು ಈ ತರಹ technical objection ತೆಗೆದಿಕೊಂಡು, ನಾವು ಎಲ್ಲರೂ ಒಳ್ಳೆಯ ಮನಸ್ಸಿನಿಂದ ಡಾ: ವಿಷ್ಣುವರ್ಧನ್‌ರವರಿಗೆ ಗೌರವ ಸೂಚಿಸಬೇಕು ಎನ್ನುವುದಾದರೆ, ರಾಜ್ಯ ಗೌರವ ಸೂಚಿಸಬೇಕು, ಸರ್ಕಾರ ಗೌರವ ಸೂಚಿಸಬೇಕು, ಸದನ ಗೌರವ ಸೂಚಿಸಬೇಕು ಎನ್ನುವುದಾದರೆ, ಯಾವುದೇ ರೀತಿಯಲ್ಲಿ ಇದನ್ನು ತೀರಾ ಚರ್ಚೆಗೆ ಎಳೆಯುವುದಕ್ಕೆ ಹೋಗಬೇಡಿ. ಇದರಲ್ಲಿ ರಾಜಕೀಯ ಮಾಡುವ ಉದ್ದೇಶ ನಮಗಿಲ್ಲ. ನಿಮಗೆ ಗೊತ್ತಾಯಿತು, If you are not serious, ನೀವು ಏಕೆ ವಿಷ್ಣುರವರ ಶ್ರದ್ಧಾಂಜಲಿ ಅರ್ಪಿಸಲು ಸಂತಾಪ ಸೂಚನೆ ತರುತ್ತೀರಿ? ಹಾಗಾದರೆ ಮುಂದಕ್ಕೆ ಹಾಕಿ.

(ಗೊಂದಲ)

ಶ್ರೀ ಬಿ.ಸಿ.ಪಾಟೀಲ್ : ಇಲ್ಲಿಯವರೆಗೆ ಸಂತಾಪ ಸೂಚನೆ ಮಾಡಿದ್ದು ಬರಿ ಕಣ್ಣೀರು ಆಗುತ್ತದೆ. ಕಲಾವಿದರಿಗೆ ಅಗೌರವ ತೋರಿಸಿದ ಹಾಗೆ ಆಗುತ್ತದೆ.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಒಬ್ಬ ಹಿರಿಯ ಕಲಾವಿದನಿಗೆ ಗೌರವ ಸೂಚಿಸುವ ಔದಾರ್ಯ ಸರ್ಕಾರಕ್ಕೆ ಇಲ್ಲವೆ?

(ಗೊಂದಲ)

3. ಅಧ್ಯಕ್ಷರ ಚುನಾವಣೆ :

ವಿಷಯ : ಶ್ರೀ ಕೆ.ಜಿ. ಬೋಪಯ್ಯನವರನ್ನು ವಿಧಾನಸಭಾ ಅಧ್ಯಕ್ಷರನ್ನಾಗಿ ಚುನಾಯಿಸುವ ಬಗ್ಗೆ.

ಛೇರ್ಮನ್ : ಈ ದಿನದ ಕಾರ್ಯಕಲಾಪಗಳ ಪಟ್ಟಿಯಲ್ಲಿನ ಪ್ರಶ್ನೋತ್ತರ ಇತ್ಯಾದಿಗಳನ್ನು ಬದಿಗೊತ್ತಿ, ಸಭಾಧ್ಯಕ್ಷರ ಚುನಾವಣೆಯನ್ನು ಘನತೆವೆತ್ತ